## ನೀರು ಶುದ್ಧೀಕರಣಕ್ಕೆ ಸಿಗರೆಟ್ ಬೂದಿ

ಸಿಗರೆಟ್ ಸುಟ್ಟಾಗ ಉಳಿಯುವ ಬೂದಿಯೂ ಪ್ರಯೋಜನಕಾರಿ. ಅದರಿಂದ ಕಲುಷಿತ ನೀರಿನಲ್ಲಿರುವ ವಿಷಕಾರಿ ಅಂಶವನ್ನು ನಿರ್ಮೂಲನೆಗೊಳಿಸಬಹುದು ಎಂದು ಚೀನಾದ ವಿಜ್ಞಾನಿಗಳು ಒಂದು ವಿಚಿತ್ರ ಸತ್ಯವನ್ನು ಹೇಳಿದ್ದಾರೆ.

ಇದು ಅತ್ಯಂತ ಅಗ್ಗದ ನೀರು ಶುದ್ಧೀಕರಿಸುವ ಮಾರ್ಗ ಎಂದಿರುವ ಅವರು, ಪರಿಸರದ ಮಾಲಿನ್ಯದಿಂದ ಅಥವಾ ಕೈಗಾರಿಕೆಗಳಿಂದ ಅಂತರ್ಜಲದಲ್ಲಿ ನಂಜಿನಂಶ ಸೇರಿಕೊಂಡಿರುತ್ತದೆ. ಅದನ್ನು ಕುಡಿಯುವುದರಿಂದ ಚರ್ಮದ ಬಣ್ಣಕ್ಕೆ ಹಾನಿ ಇಲ್ಲವೆ ಹೊಟ್ಟೆ ನೋವು ಕಾಣಿಸಿಕೊಳ್ಳಬಹುದು. ಅದಕ್ಕೆ ಕಾರಣವಾಗುವ ವಿಷಕಾರಿ ಅಂಶವನ್ನು ತೆಗೆಯಲು ಅಧಿಕ ವೆಚ್ಚವಾಗುತ್ತದೆ. ನೈಸರ್ಗಿಕ ತ್ಯಾಜ್ಯ ಎನ್ನಬಹುದಾದ ಬಾಳೆ ಹಣ್ಣಿನ ಸಿಪ್ಪೆ, ಭತ್ತದ ಹೊಟ್ಟನ್ನು ಬಳಸಿ ಸ್ವಲ್ಪ ಪ್ರಮಾಣದಲ್ಲಿ ಅದನ್ನು ತೆಗೆಯಬಹುದು. ಆದರೆ, ಸಿಗರೆಟ್‌ನ ಬೂದಿಯಿಂದ ಇನ್ನೂ ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡಬಹುದು ಎನ್ನುವುದು ಸಂಶೋಧಕರ ವಾದ.

## ತಿಂಡಿ ತಿನ್ನದಿದ್ದರೂ ದಪ್ಪಗಾಗುತ್ತೀರಿ!

ತಿಂದರೆ ಮಾತ್ರ ದಪ್ಪಗೆ ಆಗುತ್ತಾರೆ ಎಂದರೆ ತಪ್ಪು. ತಿನ್ನುವುದನ್ನು ಬಿಟ್ಟರೂ ದೇಹದ ತೂಕ ಹೆಚ್ಚಾಗುತ್ತದೆ ಎನ್ನುವ ಆಶ್ಚರ್ಯದ ಸಂಗತಿಯನ್ನು ನ್ಯೂಯಾರ್ಕ್ ಸಂಶೋಧಕರು ಕಂಡುಹಿಡಿದಿದ್ದಾರೆ.

ಅಂದರೆ, ಬೆಳಿಗ್ಗೆ ನಿತ್ಯವೂ ತಿಂಡಿಯನ್ನು ತಿನ್ನುವುದನ್ನು ಬಿಟ್ಟರೆ ಅವರಿಗೆ ತಿನ್ನಬೇಕೆನ್ನುವ ಆಸೆ ಹೆಚ್ಚಾಗುತ್ತದೆ. ಅದು ಅವರ ದೇಹದ ತೂಕವನ್ನೂ ಹೆಚ್ಚಿಸುತ್ತದೆ ಎನ್ನುವುದು ಸಂಶೋಧಕರ ವಾದ.

ಸಮಯಕ್ಕೆ ಸರಿಯಾಗಿ ತಿನ್ನುವುದರಿಂದ ಆಹಾರದಲ್ಲಿರುವ ಪ್ರೊಟೀನ್ ಹಿತಾನುಭವವನ್ನು ತರುತ್ತದೆ. ತಿಂಡಿ ತಿನ್ನದೆ ಇದ್ದರೆ ಅದು ತಿನ್ನುವ ಬಯಕೆಯನ್ನು, ಅತಿಯಾಗಿ ತಿನ್ನುವ ಹಪಾಹಪಿಯನ್ನು ಹುಟ್ಟಿಸುತ್ತದೆ. ಹೀಗೆ ತಿನ್ನುವುದು ದೇಹದ ತೂಕ ಹೆಚ್ಚಾಗಲು ಕಾರಣವಾಗುತ್ತದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

## ನಡಿಗೆಯಲ್ಲಿಯೂ ಸ್ವಭಾವ ಅಡಗಿದೆ

ಮನುಷ್ಯನ ನಡಿಗೆ ಕೂಡ ಆತನ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಹೊಸ ಸಂಶೋಧನೆಯೊಂದು ಹೇಳಿದೆ.

ವ್ಯಕ್ತಿಯೊಬ್ಬನ ಸಂತೋಷ ಹಾಗೂ ದುಃಖ ಕೂಡ ಆತನ ಜೊತೆ ಹೆಜ್ಜೆಹಾಕುತ್ತವೆ. ಯಾರು ದುಃಖ ಅಥವಾ ಖಿನ್ನತೆಯಿಂದ ಅಡಿ ಇಡುತ್ತಾರೋ ಆಗ ಅವರ ಮನಸ್ಸಿನಲ್ಲಿಯೂ ಋಣಾತ್ಮಕ ಘಟನೆಗಳು ಸುಳಿದಾಡಿರುತ್ತವೆ. ಅವರ ನಡೆಯುವ ಭಂಗಿ ಕೂಡ ಅವರ ದುಃಖವನ್ನು ತೋಡಿಕೊಳ್ಳುತ್ತದೆ. ಸಂತೋಷದಲ್ಲಿದ್ದವರ ನಡಿಗೆಯಲ್ಲಿರುವ ಠೀವಿ ಬೇರೆಯದೆ ಆಗಿರುತ್ತದೆ. ಆಗ ಅವರ ಯೋಚನೆ ಕೂಡ ಗುಣಾತ್ಮಕವಾಗಿಯೇ ಇರುತ್ತದೆ. ಸಂಶೋಧಕರು ಟ್ರೆಡ್‌ಮಿಲ್ ಮೇಲೆ ಕೆಲವು ಸ್ವಯಂ ಸೇವಕರನ್ನು ನಡೆಸಿ ಪರೀಕ್ಷಿಸಿ ಈ ಅಂಶವನ್ನು ಗುರುತಿಸಿದ್ದಾರೆ.

-ಟಿಪ್ಸ್

---



'ಇಲಿ ಯಾವ ಪ್ರಾಣಿಗೆ ಹೆದರುತ್ತೆ?'

'ಬೆಕ್ಕಿಗೆ'

'ಬೆಕ್ಕು ಯಾವ ಪ್ರಾಣಿಗೆ ಹೆದರುತ್ತೆ?'

'ನಾಯಿಗೆ'

'ನಾಯಿ ಯಾವ ಪ್ರಾಣಿಗೆ ಹೆದರುತ್ತೆ?'

'ಹುಲಿಗೆ'

'ಹುಲಿ ಯಾವ ಪ್ರಾಣಿಗೆ ಹೆದರುತ್ತೆ?'

'ಮನುಷ್ಯನಿಗೆ.'

'ಮನುಷ್ಯ ಯಾರಿಗೆ ಹೆದರುತ್ತಾನೆ?'

'ತನ್ನ ಹೆಂಡತಿಗೆ'

'ನನ್ನ ಹೆಂಡತಿ ಯಾರಿಗೂ ಹೆದರಲ್ಲ ಆದರೆ ಇಲಿಗೆ ಹೆದರುತ್ತಾಳೆ!'

★★★

ತಮ್ಮ ವೈವಾಹಿಕ ಜೀವನದ 50ನೇ ವರ್ಷವನ್ನು ಆ ದಂಪತಿ ಆಚರಿಸುತ್ತಿದ್ದರು. ಪಾರ್ಟಿ ಭರ್ಜರಿಯಾಗಿ ನಡೆಯುತ್ತಿತ್ತು. ಊಟದ ವೇಳೆಗೆ ಒಬ್ಬರು ಎದ್ದುನಿಂತು ಚಪ್ಪಾಳೆ ತಟ್ಟಿ ಎಲ್ಲರ ಗಮನವನ್ನು ತಮ್ಮೆಡೆಗೆ ಸೆಳೆದುಕೊಂಡು ಹೇಳಿದರು 'ಲೇಡೀಸ್ ಅಂಡ್ ಜಂಟಲ್‌ಮೆನ್, ನಾವೆಲ್ಲಾ ಮಿಸ್ಟರ್ ಅಂಡ್ ಮಿಸೆಸ್ ಶ್ಯಾಮರಾವ್ ಅವರಿಗೆ ಶುಭಾಶಯ ಕೋರೋಣ. ಈಗ ನಾನು ಅವರಿಗೆ, ಅವರ ಸುಖ ದಾಂಪತ್ಯದ ಗುಟ್ಟಿನ ಬಗ್ಗೆ ಕೇಳಲು ಇಷ್ಟಪಡುತ್ತೇನೆ. ಮಿಸೆಸ್ ಶಾಮರಾವ್, ಮೊದಲು ನೀವು ಹೇಳಿ.'

ಮಿಸೆಸ್ ಶ್ಯಾಮರಾವ್ ಸೋಫಾದಿಂದ ಎದ್ದು ಬಂದು ಮೈಕ್ ಬಳಿ ನಿಂತು ಹೇಳಿದರು, 'ಇದರ ಹಿಂದೆ ಒಂದೇ ವಾಕ್ಯವಿದೆ. ಅದೇನೆಂದರೆ, ನೀವು ಹೇಳಿದ್ದು ಸರಿ ಎಂದು ಹೇಳುವುದು.' ಹೀಗೆಂದು ಅವರು ತಮ್ಮ ಪತಿಯೆಡೆಗೆ ಹೊರಳಿ ಕೇಳಿದರು, 'ಅಲ್ವಾ?'

'ನೀನು ಹೇಳಿದ್ದು ಸರಿ!' ಎಂದು ಶ್ಯಾಮರಾವ್ ಮುಗುಳ್ನಕ್ಕರು.

★★★

ಒಂದು ವೇಳೆ ಗಂಡ ಹೆಂಡತಿಗೆ ಕಾರಿನ ಬಾಗಿಲನ್ನು ತೆರೆದರೆ ಈ ಕೆಳಗಿನ ಮೂರು ಅಂಶಗಳನ್ನು ಗಮನಿಸಬೇಕಾಗುತ್ತದೆ:

1. ಕಾರು ಹೊಸದು
2. ಹೆಂಡತಿ ಹೊಸಬಳು
3. ಅವಳು ಬೇರೊಬ್ಬರ ಹೆಂಡತಿಯಾಗಿರಬೇಕು.

ಸಂಗ್ರಹ: ಡಿ.ಎನ್. ಶ್ರೀನಾಥ್

### ತಮಾಷೆ ಹಿಡಿಸಲ್ಲ

ಗುಂಡ ಎದುರಿಗೆ ಸಿಕ್ಕ ಸ್ನೇಹಿತ ಪೆದ್ದಣ್ಣನನ್ನು 'ಏನಯ್ಯ ಹೇಗಿದ್ದೀಯಾ?' ಎನ್ನುತ್ತ ಬೆನ್ನಿನ ಮೇಲೆ ತುಸು ಜೋರಾಗಿಯೇ ಗುದ್ದಿ ಮಾತಾಡಿಸಿದ.

ಸರಕ್ಕನೇ ರೇಗಿದ ಪೆದ್ದಣ್ಣ 'ಈಗ ನೀನು ಹೊಡೆದದ್ದು ತಮಾಷೆಗಾ ಅಥವಾ ನಿಜವಾಗ್ಲೂ ಹೊಡೆದೆಯಾ?' ಎಂದು ಮುಖ ಗಂಟಿಕ್ಕಿ ಕೇಳಿದ. ಜಗಳಕ್ಕೆ ನಿಂತಂತಿದ್ದ ಪೆದ್ದಣ್ಣನ ಭಂಗಿಯನ್ನು ನೋಡಿದ ಗುಂಡ ನೋಡೇ ಬಿಡೋಣ ಎಂದುಕೊಂಡು 'ತಮಾಷೆಗೆ ಏಕಯ್ಯಾ ಹೊಡೀಲಿ, ನಿಜವಾಗ್ಲೂ ಹೊಡೆದೆ, ಏನ್ಮಾಡ್ತಿಯಾ ಈಗ?' ಎಂದ.

'ನಿಜವಾಗ್ಲೂ ಹೊಡೆದ್ಯಾ? ಹಾಗಿದ್ರೆ ಸರಿ. ನಾನು ತಮಾಷೆಗೇನಾದ್ರೂ ಹೊಡೆದ್ಯೇನೋ ಅಂದ್ಕೊಂಡು ಕೋಪ ಮಾಡ್ಕೊಂಡಿದ್ದೆ. ನನಗೆ ತಮಾಷೆ ಅಂದ್ರೆ ಹಿಡಿಸೋಲ್ಲ ನೋಡು' ಎನ್ನುತ್ತ ಬೆನ್ನುಜ್ಜಿಕೊಂಡ.

★★★

### ಕ್ಯೂನಲ್ಲಿ ಬರಬೇಕು

'ಏನ್ರೀ, ಶರ್ಟ್- ಪ್ಯಾಂಟು ಒಗೆದು ಇಸ್ತ್ರಿ ಮಾಡಿ ತಂದ ಧೋಬಿಗೆ ದುಡ್ಡು ಕೊಡದೇ ಮುಂದಿನ ವಾರ ಬಾ ಅಂತ ಹೇಳಿದಿರಂತೆ?' ಮಡದಿ ಬೇಸರದಿಂದ ಕೇಳಿದಳು.

'ಪ್ರತಿಯೊಬ್ಬರೂ ಕ್ಯೂನಲ್ಲಿ ಬರಬೇಕು ಕಣೇ. ಆ ಬಟ್ಟೆ ಹೊಲಿದ ಟೈಲರ್‌ಗೆ ಇನ್ನೂ ಮಜೂರಿ ಕೊಟ್ಟಿಲ್ಲ ನಾನು.'

'ಯಾಕೆ?'

'ಕ್ಯೂನಲ್ಲಿ ಬರಬೇಕು. ಬಟ್ಟೆ ಅಂಗಡಿಯವನಿಗೇ ಇನ್ನು ದುಡ್ಡು ಕೊಡದೇ ಇರುವಾಗ ಟೈಲರ್ ಏನು ಅರ್ಜೆಂಟು?'

ಸಂಗ್ರಹ: ಶೋಭಾ ಅರವಿಂದ,
ಶಿವಮೊಗ್ಗ

